ಮೊಮ್ಮಗಳು ದಿಶಾ ಒಬ್ಬಳೇ ಟೀವಿಯ ಯಾವುದೋ ಇಂಗ್ಲಿಷ್ ಮ್ಯೂಸಿಕ್ ಚಾನೆಲ್ ವೀಕ್ಷಿಸುತ್ತಿದ್ದಳು. ಒಳಗೆ ಬಂದ ಚನ್ನಪ್ಪನನ್ನು ಗಮನಿಸಿದವಳೇ ಯಾವ ಖುಷಿಯಲ್ಲಿದ್ದಳೋ ಎದ್ದು ನಿಂತು, ''ಹಾಯ್ ತಾತ... ಹೌ ಆರ್ ಯೂ... ಹೌ ಇಸ್ ಅಜ್ಜಿ ಡೂಯಿಂಗ್...'' ಎಂದು ಮುಗುಳ್ನಕ್ಕಳು. ಏನೆಂದು ಉತ್ತರಿಸಬೇಕು ಎಂದು ಚನ್ನಪ್ಪನಿಗೆ ತಿಳಿಯದಿದ್ದರೂ ಮೊಮ್ಮಗಳು ಉಲ್ಲಾಸದಿಂದ ಮಾತನಾಡಿದ್ದು ಕಂಡು ಅತೀವ ಸಂತೋಷವಾಗಿ ಮಗನ ಮೇಲಿನ ಬೇಸರ ಮರೆಯಾಯಿತು. ಸುಮ್ಮನೆ ಮುಗುಳ್ನಕ್ಕು ''ಚೆನ್ನಾಗಿದಿಯೇನವ್ವೋ...'' ಎಂದು ಮೊಮ್ಮಗಳನ್ನು ಕೇಳಿ ಬ್ಯಾಗು ಹಿಡಿದುಕೊಂಡು ಸೋಫಾದ ಮೇಲೆ ಕುಳಿತ.

''ಐಯಾಮ್ ಫೈನ್... ಫೈನ್...'' ಎಂದು ಉತ್ತರಿಸಿ ಹಲಸಿನ ಹಣ್ಣಿನ ವಾಸನೆ ಗ್ರಹಿಸಿದ ದಿಶಾ ಹತ್ತಿರ ಬಂದು ಬ್ಯಾಗನ್ನು ಬಿಚ್ಚಿನೋಡಿ, ''ವಾವ್... ಜಾಕ್ ಫ್ರೂಟ್... ಲವ್ಲೀ...'' ಎಂದು ಖುಷಿಯಿಂದ ನುಡಿದದ್ದು ಚನ್ನಪ್ಪನ ಸಂತಸವನ್ನು ಇಮ್ಮಡಿಗೊಳಿಸಿತು.

ಒಳಗೆ ಅಡಿಗೆ ಮನೆಗೆ ಹೋದ ಮಗನನ್ನು ಉದ್ದೇಶಿಸಿ, ''ಚಾಕು ತಗಂಬಾರೋ... ಹಣ್ಣು ಕುಯ್ತೀನಿ...'' ಎಂದ ಚನ್ನಪ್ಪನ ಮಾತಿಗೆ ಪ್ರತಿಯಾಗಿ ಚಂದ್ರಕಾಂತ ಹಾಲಿಗೆ ಬಂದು, ''ಟೀ ಮಾಡ್ತೀನಿ... ಆಮೇಲೆ ನಾನೇ ಕುಯ್ತೀನಿ ಬಿಡು...'' ಎಂದ.

''ಕಂಡಿದೀನಿ ನೀನು ಕುಯ್ಯದಾ... ಎಷ್ಟು ಹಲಸಿನ ಹಣ್ಣು ಕುಯ್ದಿದೀಯೋ... ತಗಂಬರೋಗೊ ಚಾಕಾ...'' ಎಂದು ನಕ್ಕ ಚನ್ನಪ್ಪ.

''ಯು ಆರ್ ರೈಟ್... ಯು ಆರ್ ರೈಟ್...'' ಎಂದು ತನ್ನ ಡ್ಯಾಡಿಯನ್ನು ಗೇಲಿ ಮಾಡಿ ನಕ್ಕಳು ದಿಶಾ.

ಮರುಮಾತನಾಡದೇ ಚಂದ್ರಕಾಂತ ಒಳಗೆ ಹೋಗಿ ಸ್ಟೀಲಿನ ಉದ್ದನೆಯ ಚಾಕುವೊಂದನ್ನು ತಂದು ಕೊಟ್ಟ. ಟೀಪಾಯಿಯ ಕೆಳಗಿದ್ದ ಹಳೆಯ ನ್ಯೂಸ್ ಪೇಪರ್ ತೆಗೆದು ಹಾಸಿ ಅದರ ಮೇಲೆ ಹಲಸಿನ ಹಣ್ಣು ಇಟ್ಟು ಚಕ್ಕಂಬಕ್ಕಲ ಹಾಕಿಕೊಂಡು ಚನ್ನಪ್ಪ ಹಣ್ಣು ಕುಯ್ಯತೊಡಗಿದ. ದಿಶಾ ಬಂದು ಪಕ್ಕದಲ್ಲಿ ಕುಳಿತಳು.

''ಒಂದು ಬೋಸಿನೂ, ಒಂದು ಬಟ್ಟಲಲ್ಲಿ ಎಣ್ಣೆ ತಗಂಬಾರೋ...'' ಎಂದು ಚನ್ನಪ್ಪ ಕೂಗಿದ್ದು ಕೇಳಿ ದಿಶಾ ಎದ್ದು ಒಳಗೆ ಹೋಗಿ ಅವೆರಡನ್ನೂ ತಂದು ತಾತನ ಮುಂದಿಟ್ಟು ಮತ್ತೆ ಪಕ್ಕದಲ್ಲಿ ಕುಳಿತಳು.

ತಾತ ಬಿಡಿಸಿಕೊಟ್ಟ ಹಲಸಿನ ಹಣ್ಣಿನ ತೊಳೆಗಳನ್ನು ಚಪ್ಪರಿಸಿ ತಿನ್ನತೊಡಗಿದ ದಿಶಾ, ''ವಾವ್ ಸೋ ಸ್ವೀಟ್ ತಾತಾ... ಲವ್ ಯು ತಾತಾ...'' ಎಂದು ಹರ್ಷ ವ್ಯಕ್ತಪಡಿಸಿದಾಗ ಚನ್ನಪ್ಪನಿಗೆ ತನ್ನ ಶ್ರಮ ವ್ಯರ್ಥವಾಗಲಿಲ್ಲ ಎನಿಸಿತು.

## ಟಿ. ತಿಮ್ಮಪ್ಪ

ಕತೆಗಾರರು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ತಿಪ್ಪೂರು ಗ್ರಾಮದವರು. ಮೈಸೂರು ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಪ್ರಸ್ತುತ ತುಮಕೂರಿನ ಸರ್ಕಾರಿ ಪಾಲಿಟೆಕ್ನಿಕ್‌ನ ಆಯ್ಕೆ ಶ್ರೇಣಿ ಉಪನ್ಯಾಸಕರು. ಅವರ ಇಪ್ಪತ್ತಕ್ಕೂ ಕಿರುಗತೆ, ಸಣ್ಣಕತೆ, ನೀಳ್ಗತೆಗಳು 'ಸುಧಾ', 'ಮಯೂರ' ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವರ ಕಾದಂಬರಿಗಳು – 'ಜಂಬೂಕ', 'ಯಶೋದಾ'.